ಶ್ರೀ ಎಂ. ಪಿ. ಪಾಟೀಲ್.—ವಿಧಾನ ಸಭೆಯ ಸದಸ್ಯರ ಇ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂದು ಹೇಳಿ ನನ್ನ ಇಚ್ಛೆ ಇತ್ತು. ಅದರಂತೆ ಅವರ ಅಭಿಪ್ರಾಯ ತೆಗೆದುಕೊಂಡೆ.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದವರು ಈ ಬಗ್ಗೆ ಏನಾದರೂ ಪ್ರಶ್ನಾವಳಿಯನ್ನು ತಯಾರಿಸಿದ್ದಾರೆಯೇ ?

ಶ್ರೀ ಎಂ. ಪಿ. ಪಾಟೀಲ್.—ಪ್ರಶ್ನಾವಳಿಯನ್ನು ತಯಾರಿಸಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ಕಲೆಕ್ಷನ್ನಿನ ಪರಿಣಾಮವಾಗಿ ಸರ್ಕಾರದವರಿಗೇನಾದರೂ ಇದೇ ರೀತಿಯಲ್ಲಿ ಈ ಕಾನೂನು ತಿದ್ದುಪಡಿಯಾಗಬೇಕೆಂದು ಹೇಳಿ ಖಚಿತವಾದ ಸಲಹೆಗಳು ಬಂದಿವೆಯೇ ?

ಶ್ರೀ ಎಂ. ಪಿ. ಪಾಟೀಲ್.—ಕೆಲವು ಜನರು ಮತ್ತು ಆರ್ಗನೈಸೇಷನ್‌ಗಳವರು ಅವರ ಅಭಿಪ್ರಾಯಗಳನ್ನು ಸರ್ಕಾರದವರಿಗೆ ಆಗಲೇ ಕಳುಹಿಸಿ ಕೊಟ್ಟಿದ್ದಾರೆ.

ಶ್ರೀ ವಿ. ವಿ. ಪಾಟೀಲ್.—ರೆಜಿಸ್ಟ್ರೇಟರ್ರು ಮತ್ತು ಸಾರ್ವಜನಿಕರ ಕಡೆಯಿಂದ ತಾವು ಅಭಿಪ್ರಾಯ ತೆಗೆದುಕೊಂಡಿರುವುದರಿಂದ ಮುಂದೆ ಸರ್ಕಾರದ ಧೋರಣೆ ಏನಿರುತ್ತದೆ ? ಸಾರ್ವಜನಿಕರ ಕಡೆಯಿಂದ ಏನು ಅಭಿಪ್ರಾಯತೆಗೆದುಕೊಂಡ್ದಿರಿ ಅದರ ಮೇಲೆ ಅವ್ಯಯಿಸುತ್ತವೆಯೋ ಅಥವಾ ಸರ್ಕಾರದವರಿಗೆ ನಿಶ್ಚಲಬಾದ ಒಂದು ಧೋರಣೆ ಈ ಚೆನ್ನೆಸಿ ಆಕ್ಟ್ ಬಗ್ಗೆ ಇದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಜನರ ಅಭಿಪ್ರಾಯ ತೆಗೆದುಕೊಳ್ಳುವ ಅವಶ್ಯಕ ಇತ್ತು. ಜನರ ಅಭಿಪ್ರಾಯ ಹೇಗೆ ಇರುತ್ತದೆಯೋ ಸರ್ಕಾರದ ಧೋರಣೆಯೂ ಹಾಗೇ ಇರುತ್ತದೆ ಎಂದು ಹೇಳುತ್ತಾರೆ. ಆದರೂ ಅವರ ಅಭಿಪ್ರಾಯ ತಿಳಿದುಕೊಳ್ಳುವುದು ಅವಶ್ಯಕ ಎಂದು ತಿಳಿದುಕೊಂಡಿದೆ.

ಶ್ರೀ ವಿ. ವಿ. ಪಾಟೀಲ್.—ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿ ಆಕ್ಟ್ ಇದೆ, ಆ ಆಕ್ಟ್ ಏನು ಅಲ್ಲಿನ ಜನರ ಅಭಿಪ್ರಾಯ ಏನು ಎಂಬುದು ಗೊತ್ತೇ ಇದೆ. ಪುನಃ ಅಭಿಪ್ರಾಯ ಕೇಳುವ ಅವಶ್ಯಕ ಏನಿತ್ತು ?

Sri M. P. PATIL.—That question was put and I have answered it.

ಅಧ್ಯಕ್ಷರು.—ಅಭಿಪ್ರಾಯ ಕೇಳಬೇಕೆಂದು ಎನ್ನಿಸಿತು, ಆದಕ್ಕೇ ಕೇಳಿದ್ದಾರೆ.

ಶ್ರೀ ವಿ. ವಿ. ಪಾಟೀಲ್.—ರೆಜಿಸ್ಟ್ರೇಟರ್ರುಗಳ ಮತ್ತು ಸಾರ್ವಜನಿಕ ಅಭಿಪ್ರಾಯವನ್ನು ಯಾವ ಉದ್ದೇಶದಿಂದ ಕೇಳಲಾಯಿತು ? ಆಕ್ಟ್ ಆಗಿ, ಜಾರಿ ಆದ ಮೇಲೆ ಎಷ್ಟೋ ಜನರಿಗೆ ಕೆಲವು ರೈಟ್ಸ್ ಸಿಕ್ಕಿವೆ. ಹೀಗಿರುವಾಗ ಪುನಃ ಅಭಿಪ್ರಾಯ ಕೇಳಲಿಕ್ಕೆ ಏನು ಅಗತ್ಯ ಇತ್ತು ?

ಶ್ರೀ ಎಂ. ಪಿ. ಪಾಟೀಲ್.—ಹೊಸ ಮೈಸೂರು ರಾಜ್ಯದಲ್ಲಿ ಐದು ಭಾಗ ಇದೆ. ಈ ಭಾಗಗಳಲ್ಲಿ ಬೇರೆ ಬೇರೆ ಚೆನ್ನೆಸಿ ಕಾಯಿದೆಗಳಿವೆ. ಇಂದಲ್ಲ ನಾಳೆ ಒಂದೇ ಚೆನ್ನೆಸಿ ಕಾಯಿದೆ ಮಾಡಬೇಕು. ಆ ದೃಷ್ಟಿಯಿಂದ ಯಾವತ್ತೂ ಜನರ ಅಭಿಪ್ರಾಯ ತಿಳಿದು ಕೊಳ್ಳಬೇಕಾದ್ದು ಅವಶ್ಯಕ.

Fish Industry (Improvement)

Q.—68. Sri S. S. KOLKEBAIL (Brahmawar).—

Will the Government be pleased to state :—

whether they have got any concrete proposal to improve the Fish Industry in the State ; if so, whether they will issue a White Paper embodying those proposals ?

A.—Sri H. S. RUDRAPPA (Minister for Agriculture).—

No ; the question is under the active consideration of the Government.

Sri S. S. KOLKEBAIL.—In the printed answers to my question it is said ' no '. Does it mean that Government have not bestowed any thought over the matter of fish industry ?

Sri H. S. RUDRAPPA.—The answer is ' question is under active consideration of Government.' As I have already stated yesterday, proposal is being formulated and representatives of the Norwegian State and representatives of the Government of India have come and holding consultations with the representative of the Mysore State and the scheme is being formulated. It would be implemented very soon.

Sri S. S. KOLKEBAIL.—May I know how many months or years or decades it would take to implement it ?

Sri H. S. RUDRAPPA.—Much earlier than the Hon'ble Member thinks.

Sri A. V. NARASIMHA REDDY.—Will the Government be pleased to place a copy of the proposal on the Table of the House ?

Sri H. S. RUDRAPPA.—After it is finalised, it would be placed on the Table of the House.

Supply of Electricity to Ummathur Village

Q.—21. Sri U. M. MADAPPA (Chamarajanagar).—

Will the Government be pleased to state :—

(*a*) when the estimate for supply of electricity to Ummathur village of Chamarajanagar Taluk was sanctioned ;

(*b*) if so, whether any work order has been issued ;

(*c*) if so, when ;

(SRI U. M. MADAPPA.)

(*d*) if the work order has been given, the number of poles supplied to the village ?

A.—Sri H. K. VEERANNA GOWDH (Minister for Public Works).—

(*a*) 28th January 1956.

(*b*) Yes.

(*c*) 20th March 1956.

(*d*) Nil.

ಶ್ರೀ ಯು. ಎಂ. ಮಾದಪ್ಪ.—ವರ್ಕ್ ಆರ್ಡರ್ ಕೊಟ್ಟು 8 ತಿಂಗಳಾಗಿದೆ, ಇಲ್ಲಿಯವರೆಗೂ ಪೋಲ್ ಹೋಗಿಲ್ಲ ಎಂದರೆ ಅರ್ಥವೇನು ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಇದರ ಅರ್ಥ ಆಗ ಮರದ ಪೋಲ್ ಸಿಕ್ಕಲಿಲ್ಲ, ಆ ಮೇಲೆ ಕಬ್ಬಿಣದ ಪೋಲ್ ಹಾಕಬೇಕೆಂದು ಪ್ರಯತ್ನಮಾಡಿದೆವು. ಅದನ್ನು ತರಿಸುವುದರಲ್ಲಿ ಮರದ ಪೋಲ್ ಸಿಕ್ಕುತ್ತದೆ ಎಂದು ತಿಳಿದು ಬಂತು. ಆದ್ದರಿಂದ ಯಾವುದು ಸಿಕ್ಕುತ್ತದೆಯೋ ಅದನ್ನು ಬೇಗಹಾಕಬೇಕೆಂದು ಪ್ರಯತ್ನ ನಡೆದಿದೆ.

ಶ್ರೀ ಯು. ಎಂ. ಮಾದಪ್ಪ.—ಈಪ್ರಶ್ನೆ ಕಳುಹಿಸಿದ ಮೇಲೆ ಏನಾದರೂ ಆ ಪ್ರಯತ್ನ ಫಲಗೊಂಡಿತೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಯು. ಎಂ. ಮಾದಪ್ಪ.—ಈ ಒಂದುಗ್ರಾಮಕ್ಕೆ ವಿದ್ಯುಚ್ಛಕ್ತಿ ಸಪ್ಲೈ ಮಾಡುವುದಕ್ಕೆ ವರ್ಕ್ ಆರ್ಡರ್ ಕೊಟ್ಟನಂತರ ಒಂದೆರಡು ತಿಂಗಳಾದ ಮೇಲೆ ಕೊಟ್ಟ ವರ್ಕ್ ಆರ್ಡರಿಗೆ ವಿದ್ಯುಚ್ಛಕ್ತಿ ಕೊಟ್ಟಿರುತ್ತಾರೆ. ಮೊಟ್ಟ ಮೊದಲು ಕೊಟ್ಟ ಗ್ರಾಮಕ್ಕೆ ಕೊಡದೆ ಎರಡನೆ ಗ್ರಾಮಕ್ಕೆ ಮೆಟೀರಿಯಲ್ ಸಪ್ಲೈಮಾಡುವುದು ಸರ್ಕಾರದವರ ನೀತಿಯೋ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯಾವ ಯಾವ ಗ್ರಾಮಗಳ ಕೆಲಸಕ್ಕೆ ಏನೇನು ಸಾಮಾನು ಬೇಕೋ ಅದರಮೇಲೆ ಅದು ಅವಲಂಬಿಸಿದೆ.

ಶ್ರೀ ಯು. ಎಂ. ಮಾದಪ್ಪ.—ಹೋಗಲಿ, ಈಗ ಆದರೂ ಜಾಗ್ರತೆ ಇದನ್ನ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಪರಮೇಶ್ವರಪ್ಪ.—ಬಳ್ಳಾರಿ ಜಿಲ್ಲೆಯಲ್ಲಿ ಹೊಸಪೇಜೆ ಹತ್ತಿರ ರಾಮಸಾಗರ ಗ್ರಾಮಕ್ಕೆ ಮೊದಲು ಲೈನ್ ಬಂತು. ಇನ್ನೂ ಅದಕ್ಕೆ ವಿದ್ಯುಚ್ಛಕ್ತಿ ಕೊಡದೆ ಕಂಪ್ಲಿ ಗ್ರಾಮಕ್ಕೆ ಕೊಟ್ಟಿದ್ದೀರಿ. ಇದಕ್ಕೆ ಏಕೆ ಇನ್ನೂಕೊಟ್ಟಿಲ್ಲ ?

ಅಧ್ಯಕ್ಷರು.—ಈ ಪ್ರಶ್ನೆ ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟಿಲ್ಲ. ಇದು ಚಾಮರಾಜನಗರ ತಾಲ್ಲೂಕಿನ ಉಮ್ಮತ್ತೂರು ಗ್ರಾಮಕ್ಕೆ ಸೇರಿದ್ದು. ನೀವು ಕೇಳುವ ಪ್ರಶ್ನೆ ಏಳುವುದಿಲ್ಲ.

Mathagadahalli tank, Nandagudi Hobli, Hoskote Taluk (construction)

Q.—55. Sri H. T. PUTTAPPA (Hoskote-Anekal—Scheduled Castes).—

Will the Government be pleased to state :—

(*a*) the reasons for not undertaking the construction of Mathagadahalli tank, Nandagudi Hobli in Hoskote Taluk although orders have been passed for its construction ?

(*b*) whether the authorities concerned would be instructed to take up this work early ?

A.—Sri H. K. VEERANNA GOWDH (Minister for Public Works).—

(*a*) The estimate for the work was unremunerative,

(*b*) The possibility of constructing a tank at smaller cost is being examined.

ಶ್ರೀ ಎಚ್. ಟಿ. ಪುಟ್ಟಪ್ಪ.—ಉಪಪ್ರಶ್ನೆಗಳಿಲ್ಲ.

Second Five-Year Plan

Q.—11. Sri B. MADHAVACHAR (Bhadravati).—

Will the Government be pleased to state :—

whether they have taken any steps to get the allotment under Second Five-Year Plan enhanced satisfactorily since Mysore State has grown larger ?

A.—Sri S. NIJALINGAPPA (Chief Minister).—

Yes.

ಶ್ರೀ ಬಿ. ಮಾಧವಾಚಾರ್.—ಕಾರ್ಯಕ್ರಮ ಕೈಗೊಂಡಿದೆಯೆಂದು ಹೇಳಿದೆ, ವಿವರ ಹೇಳುವುದಕ್ಕೆ ಸಾಧ್ಯವೆ ?

ಶ್ರೀ ಎಸ್. ನಿಜಲಿಂಗಪ್ಪ.—ಅಲಾಟ್‌ಮೆಂಟ್ ಎಲ್ಲಾ ಪ್ರದೇಶಗಳಿಗೂ ಕೇಳಿದ್ದೇವೆ. ಮೊದಲು ಮೈಸೂರಿಗೆ ಎಷ್ಟಿದ್ದಿಕ್ಕೋ ಅದು ಈಗ ಜಾಸ್ತಿಯಾಗಿದೆ.

ಶ್ರೀ ಬಿ. ಮಾಧವಾಚಾರ್.—ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಸ್ಟೈನ್‌ಲೆಸ್ ಸ್ಟೀಲ್ ಸಾಮಾನುಗಳನ್ನು ತಯಾರಿಸುವ ಯೋಜನೆಯಿದೆಯೆಂದು ಹೇಳಿದ್ದರು. ಈಗ ಆ ವಿಚಾರದಲ್ಲೇನು ಏರ್ಪಾಡಾಗಿದೆ ?

---

*Asterisk indicates that the remarks or speeches have not been revised by the Member concerned